# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 115 | Pages. 2 | Date: 06-03-2025, THURSDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 115 - ಪುಟಗಳು : 2 - 06 ಮಾರ್ಚ್ 2025 ಗುರುವಾರ | Ph: 8762954248 | ದರ : ₹1


# ಹಿಮ್ಸ್‌ಗೆ ಹೆಚ್ಚಿನ ಭದ್ರತೆ

## 30 ಸೆಕ್ಯೂರಿಟಿ ಗಾರ್ಡ್ ನೇಮಕ | ರೋಗಿಗಳ ಹಿತಕಾಯಲು ಕ್ರಮ



ಹಾಸನ: ಕರ್ತವ್ಯ ನಿರತ ತರಬೇತಿ ವೈದ್ಯನ ಮೇಲೆ ನಡೆದ ಹಲ್ಲೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಡಳಿತ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭದ್ರತೆ ಹೆಚ್ಚಿಸಿದೆ.

ಅಧಿಕ ಭದ್ರತಾ ಸಿಬ್ಬಂದಿ, ಸಿಸಿಟಿವಿ ಕ್ಯಾಮರಾ, ಲೈಟ್‌ಗಳನ್ನು ಅಳವಡಿಸುವ ಮೂಲಕ ಎಲ್ಲಾ ಮುಂಜಾಗ್ರತಾ ಕ್ರಮವನ್ನು ವಹಿಸಲಾಗಿದೆ. ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಆಸ್ಪತ್ರೆಯ ಸುತ್ತ ಪೊಲೀಸ್ ಗಸ್ತು ನಿಯೋಜಿಲಾಗಿದೆ. ಹೊಸದಾಗಿ 30 ಸೆಕ್ಯೂರಿಟಿಗಳ ನೇಮಕ ಮಾಡಲಾಗಿದೆ.

ಸಹಕರಿಸಲು ಮನವಿ: ರೋಗಿಗಳ ಚಿಕಿತ್ಸೆಗೆ ಪ್ರಾಣ ಮುಡಿಪಾಗಿಟ್ಟು ದಿನದ 24 ಗಂಟೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಯಾವುದೇ ರೀತಿ ತೊಂದರೆ ನೀಡದೆ ಚಿಕಿತ್ಸೆ ಪಡೆದು ಸಹಕರಿಸಬೇಕು ಎಂದು ಹಿಮ್ಸ್ ನಿರ್ದೇಶಕ ಡಾ. ರಾಜಣ್ಣ ಮನವಿ ಮಾಡಿದ್ದಾರೆ. ಒಂದು ವೇಳೆ ಚಿಕಿತ್ಸೆ ಸಂಬಂಧ ಯಾವುದಾದರೂ ಲೋಪಗಳು ಕಂಡುಬಂದರೆ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರಬೇಕು ಎಂದು ಹೇಳಿದ್ದಾರೆ.

ರೋಗಿಗಳಸಂಖ್ಯೆ ಹೆಚ್ಚಳ: ಹಾಸನವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ, ಸಾರ್ವಜನಿಕ ರೋಗಿಗಳ ಚಿಕಿತ್ಸೆಗೆ ಅನುಕೂಲವಾಗುವಂತೆ ಸರ್ಕಾರವು ಸಂಸ್ಥೆಗೆ ಎಲ್ಲಾ ರೀತಿಯ ಮೂಲಸೌಕರ್ಯ ಒದಗಿಸಿದೆ. ಹೀಗಾಗಿ ಜಿಲ್ಲೆ ಮತ್ತು ಹೊರ ಜಿಲ್ಲೆಯಿಂದ ಬರುವ ಹೊರ ಮತ್ತು ಒಳ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ.

ಪ್ರಸ್ತುತ 1,200 ಹಾಸಿಗೆಗಳ ಸಾಮರ್ಥ್ಯವಿರುವ ಸಂಸ್ಥೆಯಲ್ಲಿ ಕೆಲವು ಸಿಬ್ಬಂದಿ ಕೊರತೆ ಇದ್ದರೂ ಸಹ ಹಾಲಿ ಇರುವ ಸಿಬ್ಬಂದಿಗೆ ಪ್ರೋತ್ಸಾಹ ನೀಡಿ ದಿನದ 24 ಗಂಟೆ ವೈದ್ಯಕೀಯ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳಲಾಗುತ್ತಿದೆ.

**ವೈದ್ಯನ ಮೇಲೆ ಹಲ್ಲೆ ಬಳಿಕ ಪ್ರಕ್ರಿಯೆ**

**ಸಹಕರಿಸಲು ಸಾರ್ವಜನಿಕರಿಗೆ ಮನವಿ**


ಸಿಬ್ಬಂದಿ ಸಕ್ರಿಯವಾಗಿ ತಮ್ಮ ಸೇವೆಯಲ್ಲಿ ತೊಡಗಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ ಕೆಲವೊಮ್ಮೆ ಚಿಕಿತ್ಸೆಗೆ ಬರುವ ರೋಗಿಗಳ ಸಂಬಂಧಿಕರು, ಸಹನೆ ಮತ್ತು ಸಂಯಮ ಕಳೆದುಕೊಂಡು ಕ್ಷಣ ಮಾತ್ರಕ್ಕೆ ಉದ್ವೇಗಕ್ಕೆ ಒಳಗಾಗಿ ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸುವ ಪ್ರಸಂಗಗಳು ದಿನೇ ದಿನೇ ಹೆಚ್ಚುತ್ತಿರುವುದು ವಿಷಾದನೀಯ.

ರೋಗಿಗಳಿಗೆ ಚಿಕಿತ್ಸೆ ನೀಡುವುದು ಎಷ್ಟು ಮುಖ್ಯವೋ ನಿಯಮಗಳನ್ನು ಪಾಲಿಸುವುದು ಸಹ ಅಷ್ಟೇ ಮುಖ್ಯ. ಅಪಘಾತಕ್ಕೆ ಒಳಗಾದ ರೋಗಿಗಳು, ವಿಷ ಸೇವನೆಗೆ ಒಳಪಟ್ಟ ರೋಗಿಗಳು, ಹೊಡೆದಾಟದಿಂದ ದಾಖಲಾಗುವ ರೋಗಿಗಳಿಗೆ ಚಿಕಿತ್ಸೆ ನೀಡುವಾಗ ನಿಯಮಾನುಸಾರ ಎಮ್‌ಎಲ್‌ಸಿ ಮಾಡಿಸುವುದು ಕಡ್ಡಾಯವಾಗಿದೆ.

ವೈದ್ಯಕೀಯ ಸಿಬ್ಬಂದಿ ಚಿಕಿತ್ಸೆ ನೀಡುವುದರ ಜತೆಗೆ ಎಮ್‌ಎಲ್‌ಸಿ ಮಾಡಿಸಿ ಎಂದು ತಿಳಿಸಿದಾಗ ಸಹನೆ ಕಳೆದುಕೊಂಡ ಕೆಲವು ರೋಗಿಯ ವಾರಸುದಾರರು ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸುತ್ತಿದ್ದು, ಈ ಘಟನೆಗಳಿಂದ ಪೊಲೀಸ್ ಠಾಣೆಯಲ್ಲಿ ದೂರುಗಳು ದಾಖಲಾಗಿವೆ ಎಂದು ಅವರು ಹೇಳಿದ್ದಾರೆ.

### ವಿವಾದದ ಸುಳಿಯಲ್ಲಿ ಹಿಮ್ಸ್

ಬಡವರ ಆಶಾ ಕಿರಣವಾಗಿದ್ದ ಹಿಮ್ಸ್ ಇತ್ತೀಚೆಗೆ ವಿವಾದದ ಸುಳಿಗೆ ಸಿಲುಕುತ್ತಿದೆ. ಆಡಳಿತ ಮಂಡಳಿ ನಿರ್ಲಕ್ಷ್ಯದಿಂದ ರೋಗಿಗಳು ಪರದಾಡುವಂತಾಗಿದೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಗಂಭೀರ ಆರೋಪ ಮಾಡಿದ್ದರು. ಈ ನಡುವೆಯೇ ವೆಂಟಿಲೇಟರ್ ಸಿಲಿಂಡರ್‌ನ ತಾಮ್ರವನ್ನು ಕೇವಲ ಒಂದು ವಾರದಲ್ಲಿ ಎರಡು ಬಾರಿ ಕಳವು ಮಾಡಲಾಯಿತು. ರೋಗಿಗಳು ಹಾಗೂ ಸಿಬ್ಬಂದಿ ನಡುವೆ ವಾಗ್ವಾದ ನಿತ್ಯ ಪ್ರಕ್ರಿಯೆಯಾಗಿದೆ. ಈ ಎಲ್ಲಾ ಕಾರಣಗಳಿಂದ ಸಮಸ್ಯೆಯ ಸುಳಿಗೆ ಸಿಕ್ಕಿರುವ ಹಿಮ್ಸ್‌ಗೆ ಹೆಚ್ಚಿನ ಭದ್ರತೆ ವಹಿಸಲಾಗಿದ್ದು ಭವಿಷ್ಯದ ದಿನಗಳು ಹೇಗಿರುತ್ತವೆ ಎಂಬುದನ್ನು ಕಾದು ನೋಡಬೇಕಿದೆ.



# ಗೊಂದಲದ ಗೂಡಾದ ಕಾಂಗ್ರೆಸ್ ಸಭೆ

ಹಾಸನ: ನಿಗಮ ಮಂಡಳಿಗಳ ಅಧ್ಯಕ್ಷರ ನೇಮಕಕ್ಕೆ ಅಭಿಪ್ರಾಯ ಸಂಗ್ರಹ ಉದ್ದೇಶದಿಂದ ಬುಧವಾರ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆ ಗೊಂದಲದ ಗೂಡಾಗಿ ಪರಿಣಮಿಸಿತು.

ಕಾಂಗ್ರೆಸ್ ಮುಖಂಡರಾದ ಹೆಚ್.ಕೆ.ಮಹೇಶ್ ಮತ್ತು ಬನವಾಸೆ ರಂಗಸ್ವಾಮಿ ಅವರ ಬೆಂಬಲಿಗರ ನಡುವೆ ಮಾತಿನ ಚಕಮಕಿ ನಡೆಯಿತು.

ಅಭಿಪ್ರಾಯ ಸಂಗ್ರಹಕ್ಕೆ ಬಂದಿದ್ದ ಕೆಪಿಸಿಸಿ ಉಪಾಧ್ಯಕ್ಷ ಸಂಪಂಗಿ, ಕಾರ್ಯದರ್ಶಿ ಶ್ರೀನಿವಾಸ್ ಮೂರ್ತಿ ಅವರು ಗಲಾಟೆ ಕಂಡು ಕಕ್ಕಾಬಿಕ್ಕಿಯಾದರು. ಎರಡೂ ಬಣದವರು ಆರಂಭದಿಂದಲೂ ಪರಸ್ಪರ ಆರೋಪ ಪ್ರತ್ಯಾರೋಪಗಳಲ್ಲೇ ಕಾಲ ಕಳೆದರು.

ಪಕ್ಷ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆಯುತ್ತಾ ಬಂದರೂ ಇನ್ನೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಸೇರಿ ಪ್ರಮುಖ ಹುದ್ದೆಗಳು ಭರ್ತಿಯಾಗಿಲ್ಲ. ಈ ಹುದ್ದೆಗಳ ಭರ್ತಿಗಾಗಿ ಮತ್ತು ಪದಾಧಿಕಾರಿಗಳ ನೇಮಕದ ಬಗ್ಗೆ ಮುಕ್ತವಾಗಿ ಚರ್ಚಿಸಲೆಂದು ಕರೆದಿದ್ದ ಸಭೆಯೂ ಗೊಂದಲದ ಗೂಡಾಗಿದ್ದರಿಂದ ಹಲವು ಕಾರ್ಯಕರ್ತರು ತಮ್ಮ ನಾಯಕರ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ವಕ್ತಾರ ದೇವರಾಜೇಗೌಡ, ಹೆಚ್.ಕೆ.ಮಹೇಶ್, ಬನವಾಸೆ ರಂಗಸ್ವಾಮಿ, ತಾರಾ ಚಂದನ್ ಮತ್ತಿತರರು ಇದ್ದರು.

# ಇಂಗ್ಲಿಷ್ ಓದಲು 9ನೇ ತರಗತಿ ವಿದ್ಯಾರ್ಥಿಗಳ ಹಿಂದೇಟು

## ಜಿಲ್ಲಾಧಿಕಾರಿ ಅಸಮಾಧಾನ | ಗುಣಮಟ್ಟದ ಶಿಕ್ಷಣ ನೀಡಲು ಸೂಚನೆ



ಚನ್ನರಾಯಪಟ್ಟಣ: ಒಂಬತ್ತನೇ ತರಗತಿ ವಿದ್ಯಾರ್ಥಿನಿಯರಿಗೆ ಪಠ್ಯ ಪುಸ್ತಕದಲ್ಲಿರುವ ಇಂಗ್ಲಿಷ್ ಓದಲು ಬರಲ್ಲ...

ಇದು ತಾಲ್ಲೂಕಿನ ನುಗ್ಗೇಹಳ್ಳಿಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ ವಸತಿ ನಿಲಯದ ವಿದ್ಯಾರ್ಥಿಗಳ ಪರಿಸ್ಥಿತಿ. ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು ಮಂಗಳವಾರ ಸಂಜೆ ದಿಢೀರ್ ಭೇಟಿ ನಡೆಸಿದಾಗ ಈ ಮಾಹಿತಿ ಬಹಿರಂಗವಾಯಿತು. ವಿದ್ಯಾರ್ಥಿಗಳ ಕೊಠಡಿ, ಶೌಚಾಲಯ, ಅಡುಗೆ ಕೊಠಡಿ, ಆಹಾರ ದಾಸ್ತಾನು ಉಗ್ರಾಣ ಪರಿಶೀಲಿಸಿದ ಜಿಲ್ಲಾಧಿಕಾರಿ ಅವರು ವಿದ್ಯಾರ್ಥಿನಿಯರಿಗೆ ಇಂಗ್ಲಿಷ್ ಪಠ್ಯ ಪುಸ್ತಕವನ್ನು ತರುವಂತೆ ತಿಳಿಸಿದರು. ಓದುವಂತೆ ತಿಳಿಸಿದಾಗ ಕೆಲ ವಿದ್ಯಾರ್ಥಿಗಳು ಪದಗಳನ್ನು ಗುರುತಿಸಲು ಸಾಧ್ಯವಾಗದೆ ತಡಬಡಾಯಿಸಿದರು. ಅದರಿಂದ ಅಸಮಾಧಾನಗೊಂಡ ಜಿಲ್ಲಾಧಿಕಾರಿ, ಈ ವಿದ್ಯಾರ್ಥಿಗಳು ಯಾವ ಶಾಲೆಗಳಲ್ಲಿ ಓದುತ್ತಿದ್ದಾರೆ ಎಂದು ಮಾಹಿತಿ ಪಡೆದರು. ಅದಕ್ಕೆ ವಸತಿ ನಿಲಯದ ಅಧಿಕಾರಿಗಳು ಮಾಹಿತಿ ನೀಡಿ ಕರ್ನಾಟಕ ಪಬ್ಲಿಕ್ ಶಾಲೆ ಹಾಗೂ ದರ್ಶಿನಿ ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾರೆ ಎಂದರು.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡದಿದ್ದರೆ ಏನು ಪ್ರಯೋಜನ. 9ನೇ ತರಗತಿ ವಿದ್ಯಾರ್ಥಿನಿಗೆ ಪಠ್ಯ ಪುಸ್ತಕದಲ್ಲಿರುವ ಪದವನ್ನೇ ಜೋಡಿಸಿ ಓದಲು ಬರದಿದ್ದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೇಗೆ ಉತ್ತೀರ್ಣರಾಗುತ್ತಾರೆ. ಈ ಬಗ್ಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದರು. ಬಾಲಕರ ವಸತಿ ನಿಲಯದ ಉತ್ತಮ ನಿರ್ವಹಣೆಗೆ ಜಿಲ್ಲಾಧಿಕಾರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ. ಕುಮಾರ್ ಮಾತನಾಡಿ, ತಾಲ್ಲೂಕಿನಲ್ಲಿ ಇಲಾಖೆಯ 22 ಮೆಟ್ರಿಕ್ ಪೂರ್ವ ವಸತಿ ನಿಲಯಗಳಿವೆ. ಎಲ್ಲಾ ಹಾಸ್ಟೆಲ್ ಸೇರಿ 5 ವಾರ್ಡನ್‌ಗಳಿರುವುದರಿಂದ ಕರ್ತವ್ಯ ನಿರ್ವಹಿಸಲು ಸಮಸ್ಯೆಯಾಗುತ್ತಿದೆ. ಖಾಲಿ ಇರುವ ವಾರ್ಡನ್ ಹುದ್ದೆಗೆ ನೇಮಕ ಮಾಡಿದರೆ ಅನುಕೂಲವಾಗುತ್ತದೆ ಎಂದರು.

ಆರೋಗ್ಯ ಕೇಂದ್ರಕ್ಕೆ ಭೇಟಿ: ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಭೇಟಿ ನೀಡಿ ರೋಗಿಗಳೊಂದಿಗೆ ಸಮಾಲೋಚನೆ ನಡೆಸಿದರು.

ರಾತ್ರಿ ವೇಳೆ ವೈದ್ಯರಿಲ್ಲದೆ ಭಾರೀ ತೊಂದರೆಯಾಗುತ್ತಿದೆ. ಇಸಿಜಿ ವ್ಯವಸ್ಥೆ ಇಲ್ಲವಾಗಿದೆ. ಗ್ರಾಮೀಣ ಭಾಗದ ಆಸ್ಪತ್ರೆಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಆಸ್ಪತ್ರೆ ಕುಂದು ಕೊರತೆಗಳ ಬಗ್ಗೆ ಗಮನಹರಿಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆಯನ್ನು ಜಿಲ್ಲಾಧಿಕಾರಿ ನೀಡಿದರು.

ತಹಶೀಲ್ದಾರ್ ನವೀನ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲ್ಲೂಕು ಅಧಿಕಾರಿ ರಾಜೇಶ್ ಚವ್ಹಾಣ್, ಹೋಬಳಿ ಕಂದಾಯ ಅಧಿಕಾರಿ ಲತೇಶ್, ವಾರ್ಡನ್ ಉಷಾರಾಣಿ, ರೈತ ಸಂಘದ ತಾಲ್ಲೂಕು ಅಧ್ಯಕ್ಷ ರಾಮಚಂದ್ರು, ಕೃಷಿ ಪತ್ತಿನ ಅಧ್ಯಕ್ಷ ಹುಲಿಕೆರೆ ಸಂಪತ್ ಕುಮಾರ್, ಗ್ರಾಮಸ್ಥರಾದ ದಿನೇಶ್, ಬಸವನಪುರ ಬಾಬು, ಚಂದ್ರು ಯಾದವ್, ಕುಮಾರ ಯಾದವ್, ಎನ್.ಸಿ. ನಟೇಶ್, ಜಿತೇಂದ್ರ, ವಿರೂಪಾಕ್ಷಪುರ ಮೂರ್ತಿ ಮತ್ತಿತರರಿದ್ದರು.

# ದೆಹಲಿಯಲ್ಲಿ ಶ್ರವಣಬೆಳಗೊಳ ಚಾರುಶ್ರೀಗೆ ಅದ್ದೂರಿ ಸ್ವಾಗತ



ಚನ್ನರಾಯ.ಪಟ್ಟಣ: ಜೈನಕಾಶಿ ಶ್ರವಣಬೆಳಗೊಳ ಶ್ರೀಕ್ಷೇತ್ರದ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ರಾಷ್ಟ್ರ ರಾಜಧಾನಿ ನವದೆಹಲಿ ಪುರಪ್ರವೇಶ ಮಾಡಿದರು.

ಶ್ರೀಗಳ ಆಗಮನ ಹಿನ್ನೆಲೆಯಲ್ಲಿ ಭವ್ಯ ಹಾಗೂ ಭಕ್ತಿಪೂರ್ವಕ ಮೆರವಣಿಗೆಯೊಂದಿಗೆ ಸ್ವಾಗತಿಸಲಾಯಿತು. ತರುವಾಯ ದೇಶದ ಅತಿದೊಡ್ಡ ಬ್ರಹ್ಮಕಮಲ ಆಡಿಟೋರಿಯಂನ ಯಶೋಭೂಮಿ ಕನ್ವೆಷನ್ ಹಾಲ್‌ನಲ್ಲಿ ಮಹಾಸ್ವಾಮೀಜಿ ಅವರ ಅದ್ದೂರಿ ಹಾಗೂ ಭಕ್ತಿಪೂರ್ವಕ ಸಮಾರಂಭವನ್ನು ಆಯೋಜಿಸಿ ಅಪಾರ ಮಂದಿ ಸೇರಿ ಅಭಿನಂದಿಸಿ ಸತ್ಕರಿಸಿದರು.

ಸ್ವಾಮೀಜಿ ಅವರು ಪ್ರಪ್ರಥಮವಾಗಿ ದೆಹಲಿಗೆ ಪದಾರ್ಪಣೆ ಮಾಡಿದ ಹಿನ್ನೆಲೆಯಲ್ಲಿ ದೆಹಲಿಯ ನೂತನ ಮುಖ್ಯಮಂತ್ರಿ ರೇಖಾಗುಪ್ತಾ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಮೊದಲಾದವರು ಸೇರಿ ಪೂಜ್ಯ ಶ್ರೀ ಸ್ವಾಮೀಜಿ ಅವರನ್ನು ವಿನಮ್ರವಾಗಿ ಸ್ವಾಗತಿಸಿ ಅಭಿನಂದಿಸಿದರು.

ದೆಹಲಿಯ ಮೂವರು ಸಂಸದರು, ಶಾಸಕರು, ಕಾರ್ಯಕ್ರಮದಲ್ಲಿ ಭಾಗಿಯಾಗಿ ಊರು, ಹಾಗೆಯೇ ದೆಹಲಿಯ ಅನೇಕ ಸಮಾಜ, ಸಮುದಾಯಗಳ ಪ್ರಮುಖರು, ಉದ್ಯಮಿಗಳು, ಅಧಿಕಾರಿಗಳು ಹಾಗೂ ದೆಹಲಿಯಲ್ಲಿ ನೆಲೆಸಿರುವ ಮೂರು ಸಾವಿರಕ್ಕೂ ಹೆಚ್ಚು ಶ್ರವಣಬೆಳಗೊಳದ ಭಕ್ತ ಜನರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಶ್ರೀಗಳನ್ನು ಕಂಡು ಸಂತಸಗೊಂಡರು.

ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ದೇಶದ ರಾಜಧಾನಿಗೆ ಇದೇ ಮೊದಲ ಬಾರಿಗೆ ಭೇಟಿ ಕೊಟ್ಟಿದ್ದು ಅತೀವ ಸಂತಸ ಸಂದಿದೆ. ಅದರಲ್ಲೂ ನೀವೆಲ್ಲರೂ ಸೇರಿ ಸತ್ಕರಿಸಿದ್ದು ಅವಿಸ್ಮರಣೀಯ ಕ್ಷಣ. ಶ್ರೀಕ್ಷೇತ್ರದ ಸಾವಿರಾರು ಮಂದಿ ಇಲ್ಲಿ ನೆಲೆಸಿರುವುದು ಮತ್ತೊಂದು ಸಂತಸ ಉಂಟು ಮಾಡಿದೆ ಎಂದು ನುಡಿದರು.

# ಮೂವರು ಬೈಕ್ ಕಳ್ಳರ ಬಂಧನ

ಸಕಲೇಶಪುರ: ಉಪವಿಭಾಗದ ಅಪರಾಧ ತಂಡದ ಕಾರ್ಯಾಚರಣೆಯಲ್ಲಿ ಬೈಕ್ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು 6 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಹಾಸನದ ದೇವೇಗೌಡ ನಗರದ ಮಂಜುನಾಥ, ತಟ್ಟೆಕೆರೆ ರೋಹಿತ್ ಹಾಗೂ ದೊಡ್ಡಮಂಡಿಗನಹಳ್ಳಿ ಪ್ರಮೋದ್ ಬಂಧಿತರು.

ಸಕಲೇಶಪುರ ಡಿವೈಎಸ್ಪಿ ಪ್ರಮೋದ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ನಗರ ಪೊಲೀಸ್ ಇನ್ಸ್‌ಪೆಕ್ಟರ್ ನಿರಂಜನ್ ಕುಮಾರ್, ಗ್ರಾಮಾಂತರ ಇನ್ಸ್‌ಪೆಕ್ಟರ್ ಜಗದೀಶ್, ಎಸ್‌ಐಗಳಾದ ಸರ್ದಾರ್, ಪ್ರಸನ್ನ, ಕೃಷ್ಣಪ್ಪ ಹಾಗೂ ಸಿಬ್ಬಂದಿ ಪೃಥ್ವಿ, ಸುನೀಲ್, ಚಂದ್ರಕಾಂತ್, ಶಾಂತರಾಜ್ ಅವರ ತಂಡ ಕಾರ್ಯಾಚರಣೆ ನಡೆಸಿತು.

ಬಂಧಿತರಿಂದ 5 ಲಕ್ಷ ರೂ. ಮೌಲ್ಯದ 6 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ನಗರ ಮತ್ತು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇಂದು ಜೆಡಿಎಸ್ ಪ್ರತಿಭಟನೆ



ಹಾಸನ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಾಗುತ್ತಿರುವ ವಿಳಂಬ ಹಾಗೂ ಗೊಂದಲ ಖಂಡಿಸಿ ಜೆಡಿಎಸ್ ವತಿಯಿಂದ ರಾಜ್ಯಾದ್ಯಂತ ಮಾ. 6ರ ಗುರುವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಸ್. ಲಿಂಗೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕೇವಲ ಗ್ಯಾರಂಟಿ ಜಪದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಯನ್ನು ಸಂಪೂರ್ಣ ಮರೆತಿದೆ. ಪಂಚ ಗ್ಯಾರಂಟಿಗಳು ಸರಿಯಾಗಿ ಅನುಷ್ಠಾನ ಆಗುತ್ತಿಲ್ಲ ಎಂದು ದೂರಿದರು.

ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ಘೋಷಿಸಿ 5 ಕೆ.ಜಿ. ನೀಡುತ್ತಿದ್ದಾರೆ. ಉಳಿದ 5 ಕೆ.ಜಿ.ಗೆ ಮಾಸಿಕ ನೀಡುತ್ತಿದ್ದ ತಲಾ 170 ರೂ. ಹಣ ಮೂರ್‍ನಾಲ್ಕು ತಿಂಗಳಿಂದ ಬಿಡುಗಡೆ ಆಗಿಲ್ಲ. ಗೃಹಲಕ್ಷ್ಮಿ ಯೋಜನೆ ಹಣವೂ ಕಳೆದ 4 ತಿಂಗಳಿಂದ ಫಲಾನುಭವಿಗಳ ಖಾತೆಗೆ ಜಮೆ ಆಗಿಲ್ಲ. ಫಲಾನುಭವಿಗಳು ಬಿಪಿಎಲ್ ಕಾರ್ಡ್ ಕೊಡಿ ಅಂತಾರೆ, ಆದರೆ ಎಲ್ಲರೂ ಕಾರ್ಡ್ ಮಾಡಿಸಲು ಈ ಸರ್ಕಾರ ಅವಕಾಶವನ್ನೇ ಕೊಟ್ಟಿಲ್ಲ ಎಂದು ಆರೋಪಿಸಿದರು.

ಗೃಹಜ್ಯೋತಿ ಯೋಜನೆಯಲ್ಲೂ ನುಡಿದಂತೆ ನಡೆದಿಲ್ಲ. ಒಂದು ಟಿಸಿಗೆ 3 ಲಕ್ಷ ರೂ. ಕೊಡಬೇಕು. ಹೆಚ್.ಡಿ.ರೇವಣ್ಣ ಅವರ ಕಾಲದಲ್ಲಿ ಹಲವು ಸ್ಟೇಷನ್ ನಿರ್ಮಾಣ ಆಗಿದ್ದವು. ಆದರೀಗ ಸರಿಯಾಗಿ ಕರೆಂಟ್ ಕೊಡುತ್ತಿಲ್ಲ. ವಿದ್ಯುತ್ ವ್ಯವಸ್ಥೆ ಹಾಳಾಗಿದೆ ಎಂದು ಜರಿದರು.

ಶಕ್ತಿ ಯೋಜನೆ ಲಾಭವನ್ನು ಬಹುತೇಕ ಮಹಿಳೆಯರು ಬಳಸಿಕೊಳ್ಳುತ್ತಿದ್ದಾರೆ. ಆದರೆ ಅನೇಕ ಮಾರ್ಗಗಳಲ್ಲಿ ಅದರಲ್ಲೂ ಗ್ರಾಮೀಣ ಭಾಗಕ್ಕೆ ಬಸ್ ಸಂಚಾರವನ್ನೇ ರದ್ದುಪಡಿಸಲಾಗಿದೆ ಎಂದರು. ಅದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಹಾಸ್ಟೆಲ್‌ಗಳಲ್ಲೂ ಸೌಲಭ್ಯ ಸರಿಯಾ ಗಿಲ್ಲ. ಅರ್ಹ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡುತ್ತಿಲ್ಲ. ಒಟ್ಟಿನಲ್ಲಿ ಈ ಸರ್ಕಾರ ಬರ್‌ಬಾದ್ ಎಂದು ವಾಗ್ದಾಳಿ ನಡೆಸಿದರು. ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಶೇಷಾದ್ರಿ, ಸೋಮನಹಳ್ಳಿ ನಾಗರಾಜ್, ಎಸ್.ದ್ಯಾವೇಗೌಡ ಇದ್ದರು.

# ಪ್ರತ್ಯೇಕ ಪ್ರಕರಣ: 7 ಲಕ್ಷ ರೂ. ಚಿನ್ನಾಭರಣ ಕಳವು

ಹಾಸನ: ಶ್ರಣಬೆಳಗೊಳ ಹಾಗೂ ಆಲೂರು ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದ ಪ್ರತ್ಯೇಕ ಪ್ರಕರಣದಲ್ಲಿ 7 ಲಕ್ಷ ರೂ. ಮೊತ್ತದ ಚಿನ್ನಾಭರಣ ಕಳವು ಮಾಡಲಾಗಿದೆ.

ಶ್ರವಣಬೆಳಗೊಳದ ಮಂಜುಳ ಅವರ ಮನೆಗೆ ನುಗ್ಗಿರುವ ಕಳ್ಳರು ಹಾಡು ಹಗಲೇ ಬಾಗಿಲು ಮುರಿದು ಬೀರುವಿನಲ್ಲಿಟ್ಟಿದ್ದ 5 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣ ಕದ್ದಿದ್ದಾರೆ.

ಮಂಜುಳ ಅವರು ಮಂಗಳವಾರ ಮನೆಗೆ ಬೀಗ ಹಾಕಿಕೊಂಡು ಅಂಗಡಿಗೆ ತೆರಳಿದಾಗ ಬಂದಿರುವ ಕಳ್ಳರು ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ 25 ಗ್ರಾಂ ತೂಕದ ಮಾಂಗಲ್ಯ ಸರ, 12 ಗ್ರಾಂ ತೂಕದ ಚಿನ್ನದ ಲಕ್ಷ್ಮಿ ಡಾಲರ್, 8 ಗ್ರಾಂ ತೂಕದ ಚಿನ್ನದ ಗುಂಡಿನ ಸರ, 3 ಗ್ರಾಂ ತೂಕದ ಚಿನ್ನದ ಮಾಟಿ, 1 ಗ್ರಾಂ ತೂಕದ ಉಂಗುರ ಹಾಗೂ 30 ಸಾವಿರ ರೂ. ನಗದು ದೋಚಿ ಪರಾರಿಯಾಗಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆಯ ಬಾಗಿಲು ಮುರಿದು 2 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಆಲೂರು ತಾಲ್ಲೂಕಿನ ಚಿಕ್ಕಕಣಗಾಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಾಗೇಶ್ ಅವರು ಕುಟುಂಬ ಸಮೇತ ಮನೆಗೆ ಬೀಗ ಹಾಕಿಕೊಂಡು ಮದುವೆ ನಿಮಿತ್ತ ಬೇರೆ ಊರಿಗೆ ತೆರಳಿದ್ದರು. ಅದನ್ನು ಖಚಿತಪಡಿಸಿಕೊಂಡ ಕಳ್ಳರು ಬಾಗಿಲು ಮುರಿದು ಚಿನ್ನದ ನಕ್ಲೇಸ್, ಎರಡು ಜೊತೆ ಚಿನ್ನದ ಓಲೆ, 2 ಚಿನ್ನದ ಉಂಗುರ ಕಳವು ಮಾಡಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಾಸನ ವಿವಿ ಉಳಿವಿಗಾಗಿ ಹೋರಾಟ ಸಮಿತಿ ರಚನೆ: ಡಾ. ವೀರಭದ್ರಪ್ಪ



ಹಾಸನ: ಹಾಸನ ವಿಶ್ವವಿದ್ಯಾಲಯ ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಖಂಡಿಸಿ ಮಾ. 19 ರಂದು ಪ್ರತಿಭಟನೆ ಹಮ್ಮಿಕೊಂಡಿದ್ದು ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ ರಚಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಡಾ. ವೈ.ಎಸ್. ವೀರಭದ್ರಪ್ಪ ಹೇಳಿದರು.

ರಾಜ್ಯದ ವಿಶ್ವವಿದ್ಯಾಲಯ ಸ್ಥಿತಿಗತಿಗಳನ್ನು ಅರಿಯಲು ರಚಿಸಿದ್ದ ಸಚಿವ ಸಂಪುಟ ಉಪಸಮಿತಿಯು ಹಾಸನ ಸೇರಿ ರಾಜ್ಯದ 9 ವಿಶ್ವವಿದ್ಯಾಲಯ ಮುಚ್ಚಲು ಶಿಫಾರಸು ಮಾಡಿರುವುದು ನೋವಿನ ಸಂಗತಿ ಎಂದು ಸುದ್ದಿಗೋಷ್ಠಿಯಲ್ಲಿ ಬುಧವಾರ ಬೇಸರ ವ್ಯಕ್ತಪಡಿಸಿದರು.

ಹಾಸನದ ಅಸ್ಮಿತೆಯಾಗಿರುವ ವಿಶ್ವವಿದ್ಯಾಲಯವನ್ನು ಉಳಿಸಿಕೊಳ್ಳುವುದು ತುರ್ತು ಅಗತ್ಯವಾಗಿದೆ. ಈ ಹಿನ್ನಲೆಯಲ್ಲಿ ಮಾ. 19ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪೂರ್ವಭಾವಿಯಾಗಿ ಮಾ. 16 ರಂದು ನಗರದ ಅಂಬೇಡ್ಕರ್ ಭವನದಲ್ಲಿ ದುಂಡು ಮೇಜಿನ ಸಭೆ ಏರ್ಪಡಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆ ನೀಡಬೇಕೆಂದು ಕೋರಿದರು.

ಕನ್ನಡಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ ಮಾತನಾಡಿ, ಹಿಂದಿನ ಸರ್ಕಾರದವರು ಆರಂಭಿಸಿದ್ದ ವಿಶ್ವವಿದ್ಯಾಲಯ ಮುಚ್ಚಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ. ಹಾಸನ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 30 ಸಾವಿರ ವಿದ್ಯಾರ್ಥಿಗಳು ಹಾಗು 54 ಕಾಲೇಜುಗಳಿವೆ. ವಿವಿಯಲ್ಲಿ 600 ಮಕ್ಕಳು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. 30 ಸಾವಿರ ಮಕ್ಕಳಿಗೆ ಒಂದು ವಿಶ್ವವಿದ್ಯಾಲಯ ನೀಡುವುದು ಶಿಕ್ಷಣಕ್ಕೆ ಪೂರಕ. ಇರುವ ವಿವಿಗೆ ಸೌಕರ್ಯ ಕಲ್ಪಿಸಿ ಗುಣಮಟ್ಟದ ಶಿಕ್ಷಣಕ್ಕೆ ಕ್ರಮ ಕೈಗೊಳ್ಳಬೇಕಿದ್ದ ಸರ್ಕಾರ ಬಾಗಿಲು ಹಾಕುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಹಿರಿಯ ಪತ್ರಕರ್ತ ಆರ್.ಪಿ. ವೆಂಕಟೇಶಮೂರ್ತಿ, ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ದಲಿತ ಮುಖಂಡ ಹೆಚ್.ಕೆ. ಸಂದೇಶ್, ಹಾಸನ ವಿವಿ ಪ್ರಾಧ್ಯಾಪಕ ಡಾ. ಮಹೇಶ್, ಎಂ.ಜಿ. ಪೃಥ್ವಿ ಇದ್ದರು.

# ಹಿಂದು ರುದ್ರಭೂಮಿಗೆ ಅಗತ್ಯ ಸೌಲಭ್ಯ

ಅರಸೀಕೆರೆ: ನಗರದ ಸಾರ್ವಜನಿಕ ಹಿಂದು ರುದ್ರಭೂಮಿಯಲ್ಲಿ ಶವ ಸಂಸ್ಕಾರ ಮಾಡಲು ಬರುವವರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಿಕೊಡಲು ನಗರಸಭೆ ಮುಂದಾಗಿದೆ.

ಲಕ್ಷಾಂತರ ರೂ. ವೆಚ್ಚದಲ್ಲಿ ಸ್ಮಶಾನದಲ್ಲಿ ಬೆಳೆದಿದ್ದ ಗಿಡಗಂಟಿ ತೆರವು ಮಾಡಲಾಗಿದೆ. ಹಾಗೆಯೇ ಸ್ಮಶಾನದ ಆವರಣದ ಒಳ-ಹೊರಗೆ ರಸ್ತೆ ನಿರ್ಮಾಣ ಮಾಡಲಾಗಿದೆ. ಜೊತೆಗೆ ವಿದ್ಯುತ್ ದೀಪ ಅಳವಡಿಕೆ, ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಸೇರಿದಂತೆ ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ.



ಬುಧವಾರ ಬೆಳಿಗ್ಗೆ ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ ಇತರರು ಭೇಟಿ ನೀಡಿ ಕಾಮಗಾರಿ ವೀಕ್ಷಣೆ ಮಾಡಿದರು. ಬಳಿಕ ಮಾತನಾಡಿದ ಅಧ್ಯಕ್ಷರು, ನಗರವನ್ನು ಹೇಗೆ ಸ್ವಚ್ಛವಾಗಿ ಇಟ್ಟುಕೊಳ್ಳುತ್ತೇವೆಯೋ ಅದೇ ರೀತಿ ಶವಸಂಸ್ಕಾರ ಮಾಡುವ ರುದ್ರಭೂಮಿಯ ಆವರಣವನ್ನೂ ಅಷ್ಟೇ ಕ್ಲೀನ್ ಆಗಿ ಇಟ್ಟುಕೊಳ್ಳುವುದು ಕೇವಲ ನಗರಸಭೆ ಮಾತ್ರವಲ್ಲ, ಸಾರ್ವಜನಿಕರ ಸಹಕಾರ ಕೂಡ ಅತ್ಯಗತ್ಯ ಎಂದರು.

ಈ ನಿಟ್ಟಿನಲ್ಲಿ ಹಿಂದೂ ರುದ್ರಭೂಮಿಯ ಅಭಿವೃದ್ಧಿಗೆ ನಗರಸಭೆ ಆಡಳಿತ ಎಲ್ಲ ರೀತಿಯ ಕ್ರಮ ಕೈಗೊಂಡಿದೆ. ರುದ್ರ ಭೂಮಿ ಆವರಣವನ್ನು ಉದ್ಯಾನವನದ ರೀತಿ ಮಾರ್ಪಡಿಸಲು ನಗರಸಭೆಯ ಜೊತೆ ಪ್ರಗತಿಪರ ಸಂಘಟನೆಗಳು, ಸಾರ್ವಜನಿಕರು ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ನಗರಸಭೆ ಕಾರ್ಯಪಾಲಕ ಇಂಜಿನಿಯರ್ ಸುನಿಲ್, ನಗರಸಭೆ ಸದಸ್ಯರು ಮತ್ತು ಸಿಬ್ಬಂದಿ ಹಾಜರಿದ್ದರು.

# ಶ್ರೀ ರಾಮೇಶ್ವರ ದೇವಾಲಯ ಜಾಗ ಉಳಿಸಲು ಗ್ರಾಮಸ್ಥರ ಒತ್ತಾಯ



ಬೇಲೂರು: ತಾಲ್ಲೂಕಿನ ಹೆಬ್ಬಾಳು ಗ್ರಾಮದ ಶ್ರೀ ರಾಮೇಶ್ವರ ದೇವಾಲಯ ಜಾಗ ಒತ್ತುವರಿ ಯತ್ನ ನಡೆದಿದ್ದು ಸರ್ಕಾರ ಉಳಿಸಿಕೊಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸರ್ವೆ ನಂ. 132ರಲ್ಲಿ 5 ಎಕರೆ 10 ಗುಂಟೆ ಭೂಮಿ ಇದೆ. ಈ ಆಸ್ತಿ ಕಳೆದ ನಾಲ್ಕು ದಶಕದಿಂದ ಹಿಂದೆ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದ ಬಸವೇಗೌಡ ಅವರ ಹೆಸರಿಗೆ ಖಾತೆಯಾಗಿದೆ. ಬಸವೇಗೌಡ ಕುಟುಂಬಸ್ಥರು ದೇವರ ಹೆಸರಿನ ಭೂಮಿ ಬೇಡವೆಂದರೂ ಕೆಲವರು ಆಸ್ತಿ ಒತ್ತುವರಿ ದುರುದ್ದೇಶದಿಂದ ಟ್ರಸ್ಟ್ ರಚನೆಗೆ ಅಡ್ಡಗಾಲು ಹಾಕುತ್ತಿದ್ದಾರೆ. ಸದ್ಯ ಅರ್ಚಕರೇ ಜಮೀನು ಉಳುಮೆ ಮಾಡಿಕೊಂಡಿದ್ದಾರೆ. ಆದರೆ ಒತ್ತುವರಿದಾರರು ನಿತ್ಯ ಅರ್ಚಕರಿಗೆ ಕಿರುಕುಳ ನೀಡುತ್ತಾ ಆಸ್ತಿಯನ್ನು ಕಬಳಿಸಲು ಯತ್ನಿಸುತ್ತಿದ್ದಾರೆ ಎಂದು ಗ್ರಾಮದ ವೇದಮೂರ್ತಿ ಅವರು ಆರೋಪಿಸಿದ್ದಾರೆ.

ಶ್ರೀ ರಾಮೇಶ್ವರ ದೇಗುಲ ಜೀರ್ಣೋದ್ಧಾರಗೊಳಿಸಿ ಹತ್ತು ವರ್ಷ ಕಳೆದಿದೆ. ಅಮೂಲ್ಯವಾದ ಭೂಮಿಯನ್ನು ಟ್ರಸ್ಟ್ ಹೆಸರಿಗೆ ಮಾಡಿಕೊಂಡು ದೇಗುಲ ನಿರ್ವಹಣೆ ಮಾಡಬೇಕು ಎಂದು ಕೆಲವರು ಸಲಹೆ ನೀಡಿದರೂ ಬಲಾಢ್ಯರ ಒತ್ತಡಕ್ಕೆ ಮಣಿಯಬೇಕಾಗಿದೆ. ಪೂರ್ವಿಕರ ಪರಿಶ್ರಮ ಹಾಗೂ ಸರ್ಕಾರದ ಉದಾರದಿಂದ ಬಂದಿರುವ ಬೆಲೆಬಾಳುವ ಭೂಮಿಯನ್ನು ಉಳಿಸಿಕೊಳ್ಳಬೇಕಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಆಸ್ತಿ ಬೇರೆಯವರ ಪಾಲಾಗುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

# ವಾಹನ ಸವಾರರಿಗೆ ಪುಂಡರ ವ್ಹೀಲಿಂಗ್ ಕಿರಿಕಿರಿ


## ಮುಖ್ಯ ರಸ್ತೆಯಲ್ಲೇ ಹುಚ್ಚಾಟ | ಎಚ್ಚೆತ್ತುಕೊಳ್ಳದ ಟ್ರಾಫಿಕ್ ಪೊಲೀಸ್

ಹಾಸನ: ನಗರದಲ್ಲಿ ಟ್ರಾಫಿಕ್ ಕಿರಿಕಿರಿ, ಕೆಟ್ಟು ನಿಂತಿರುವ ಸಿಗ್ನಲ್ ಸಮಸ್ಯೆ ಮಾತ್ರವಲ್ಲದೆ ಮುಖ್ಯ ರಸ್ತೆಯಲ್ಲೇ ವ್ಹೀಲಿಂಗ್ ಹೆಚ್ಚುತ್ತಿದ್ದು ಸಾರ್ವಜನಿಕರು ಪ್ರಯಾಸದ ಸಂಚಾರ ಮಡುವಂತಾಗಿದೆ.

ಸ್ವಲ್ಪ ಎಚ್ಚರ ತಪ್ಪಿದರೂ ಭಾರಿ ಅವಘಡ ಸಂಭವಿಸುವ ಸಾಧ್ಯತೆಗಳಿವೆ. ವ್ಹೀಲಿಂಗ್ ಜನದಟ್ಟಣೆ ಇರದ ರಸ್ತೆಗಳಲ್ಲಿ ನಡೆಯುತ್ತಿಲ್ಲ. ಟ್ರಾಫಿಕ್ ಪೊಲೀಸರು ಹೆಚ್ಚಾಗಿ ಇರುವ 80 ಅಡಿ ರಸ್ತೆ, ರಿಂಗ್ ರಸ್ತೆ, ಆರ್.ಸಿ.ರಸ್ತೆ, ಸಾಲಗಾಮೆ ರಸ್ತೆಯಲ್ಲಿ ಹುಚ್ಚಾಟ ಮೆರೆಯುತ್ತಿದ್ದಾರೆ. ಆದರೆ ಸಂಚಾರ ಪೊಲೀಸರು ಕಣ್ಮುಚ್ಚಿ ಕುಳಿತಿರುವುದರಿಂದ ಪಾದಚಾರಿಗಳು, ವಾಹನ ಸವಾರರು ರಸ್ತೆಯಲ್ಲಿ ಓಡಾಡುವುದೇ ಕಷ್ಟ ಎನ್ನುವಂತಾಗಿದೆ.

ನಗರ ಹಾಗೂ ಹೊರ ವಲಯದಲ್ಲಿ ವ್ಹೀಲಿಂಗ್ ಪುಂಡರ ಹಾವಳಿ ಮಿತಿಮೀರಿದ್ದು, ವ್ಹೀಲರ್ಸ್ ಕ್ಲಬ್ ಹೆಸರಿನಲ್ಲಿ ಇನ್ಸ್ಟಾಗ್ರಾಂನಲ್ಲಿ ಖಾತೆ ತೆರೆದು ವ್ಹೀಲಿಂಗ್ ಮಾಡುವ ಹತ್ತಾರು ವಿಡಿಯೋಗಳನ್ನು ಅಪ್‌ಲೋಡ್ ಮಾಡಿದ್ದಾರೆ. ಈ ವಿಡಿಯೋಗಳು ನಗರದ 80 ಅಡಿ ರಸ್ತೆ, ರಿಂಗ್ ರಸ್ತೆಯಲ್ಲೇ ಹಲವು ದಿನಗಳಿಂದ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದರೂ ಪೊಲೀಸರು ಆ ಕಡೆ ತಿರುಗಿಯೂ ಸಹ ನೋಡುತ್ತಿಲ್ಲ. ಪುಂಡರ ವ್ಹೀಲಿಂಗ್ ಹುಚ್ಚಾಟಕ್ಕೆ ರಸ್ತೆ ಬದಿಯಲ್ಲಿ ಓಡಾಡುವ ಜನರು ಜೀವ ಭಯದಿಂದಲೇ ಸಂಚಾರ ಮಾಡುವಂತಾಗಿದೆ. ಇತರೆ ವಾಹನ ಸವಾರರು ಕೂಡ ವಾಹನ ಚಾಲನೆ ಮಾಡಲು ಭಯಪಡುವಂತಾಗಿದೆ.

ಪ್ರತಿನಿತ್ಯ ವಾಹನ ದಟ್ಟಣೆ ಇರುವ ನಗರದ ಪ್ರಮುಖ ರಸ್ತೆಗಳಲ್ಲಿ ಅಪಾಯಕಾರಿ ಪುಂಡ ಯುವಕರು ವ್ಹೀಲಿಂಗ್ ಮಾಡುತ್ತಾ ಹುಚ್ಚಾಟ ಪ್ರದರ್ಶಿಸುತ್ತಿದ್ದರೂ, ನಿಯಂತ್ರಣ ಹೇರಬೇಕಿರುವ ಸಂಚಾರಿ ಪೊಲೀಸರು ಹೆಚ್ಚು



ವಾಹನ ದಟ್ಟಣೆ ಇರುವ ಪ್ರಮುಖ ವೃತ್ತಗಳಲ್ಲೇ ಬೈಕ್‌ಸವಾರನ್ನು ಅಡ್ಡಗಟ್ಟಿ, ಹೆಲ್ಮೆಟ್, ಇನ್ಸೂರೆನ್ಸ್ ಇಲ್ಲವೆಂದು ಹಣ ಸುಲಿಗೆ ಮಾಡುವುದಲ್ಲೇ ನಿರತರಾಗಿದ್ದಾರೆ.

ಪುಂಡಾಟ ಮೆರೆಯುವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಟ್ರಾಫಿಕ್ ಪೊಲೀಸರು ಕೇವಲ ದಂಡ ವಸೂಲಿಗೆ ಮಾತ್ರ ಸೀಮಿತವಾಗಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಳಿಗ್ಗೆ, ಮಧ್ಯಾಹ್ನ, ಸಂಜೆ ವೇಳೆ ಶಾಲೆ-ಕಾಲೇಜು ಬಿಡುವ ವೇಳೆ ಹಾಜರಾಗುವ ಪುಂಡರು ವೇಗವಾಗಿ ಬೈಕ್ ಓಡಿಸುವುದು, ವಿಚಿತ್ರ ರೀತಿಯಲ್ಲಿ ಶಬ್ದ ಮಾಡಿಕೊಂಡು ವಿದ್ಯಾರ್ಥಿನಿಯರನ್ನು ಹಿಂಬಾಲಿಸಿ ಕಿರುಕುಳ ನೀಡುತ್ತಿದ್ದಾರೆ. ಮನಬಂದಂತೆ ಬೈಕ್ ಓಡಿಸುವುದು, ವಿದ್ಯಾರ್ಥಿನಿಯರು ರಸ್ತೆಯಲ್ಲಿ ಹೋಗುತ್ತಿದ್ದಾಗ ಸಮೀಪಕ್ಕೆ ಬಂದು ಜೋರಾಗಿ ಹಾರ್ನ್ ಮಾಡುವುದು, ಸೈಲನ್ಸರ್‌ನಲ್ಲಿ ಜೋರು ಶಬ್ದ ಮಾಡಿಕೊಂಡು ನಗರದ ತುಂಬೆಲ್ಲ ಓಡಾಡುತ್ತಿದ್ದರೂ ಟ್ರಾಫಿಕ್ ಪೊಲೀಸರು ಮಾತ್ರ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈ ಬಗ್ಗೆ ಸಾರ್ವಜನಿರು ಹಲವು ಬಾರಿ ಪೊಲೀಸರ ಗಮನಕ್ಕೆ ತಂದರೂ ನೆಪಮಾತ್ರಕ್ಕೆ ಒಂದೆರೆಡು ದಿನ ಬೀಟ್ ಹಾಕುತ್ತಾರೆಯೇ ವಿನಃ ಕಠಿಣ ಕ್ರಮಕ್ಕೆ ಮುಂದಾಗದೆ ಗಾಢ ನಿದ್ರೆಗೆ ಜಾರಿದಂತೆ ಕಾಣುತ್ತಿದೆ.

ಇನ್ನಾದರೂ ಸಾರ್ವಜನಿಕರ ಹಿತದೃಷ್ಟಿಯಿಂದ ಪೊಲೀಸರು ಎಚ್ಚೆತ್ತು ವ್ಹೀಲಿಂಗ್ ಪುಂಡರ ಆಟಾಟೋಪಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದಾರೆ.

ಪುಂಡರ ವಾಟ್ಸ್ ಆ್ಯಪ್ ಗ್ರುಪ್: ಪುಂಡರು ಟ್ರಾಫಿಕ್ ಕಾಪ್ಸ್ ಹೆಸರಿನಲ್ಲಿ ವಾಟ್ಸ್ ಆ್ಯಪ್ ಗ್ರೂಪ್ ಮಾಡಿಕೊಂಡಿದ್ದು, ಅದರಲ್ಲಿ ಟ್ರಾಫಿಕ್ ಪೊಲೀಸರು ಎಲ್ಲಿದ್ದಾರೆ ಎಂಬ ಮಾಹಿತಿಯನ್ನು ಫೋಟೋ ಸಹಿತ ಹಂಚಿಕೊಳ್ಳುವುದರಿಂದ ಪೊಲೀಸರು ಇಲ್ಲದ ರಸ್ತೆಯಲ್ಲಿ ವ್ಯವಸ್ಥಿತವಾಗಿ ಹುಚ್ಚಾಟ ಮೆರೆಯುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ತಿಳಿದಿದ್ದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ರೀತಿಯ ಹಲವು ಗ್ರೂಪ್‌ಗಳಿದ್ದು, ಸಾವಿರಾರು ಜನರು ಈ ಗ್ರೂಪ್‌ಗಳಲ್ಲಿ ಸೇರಿಕೊಂಡಿದ್ದಾರೆ.

ನಗರ ಮಾತ್ರವಲ್ಲದೇ ಇಡೀ ಜಿಲ್ಲೆಯಲ್ಲಿ ಟ್ರಾಫಿಕ್ ವ್ಯವಸ್ಥೆ ಕುಲಗೆಟ್ಟ ಸ್ಥಿತಿ ತಲುಪಿದೆ. ಸರಿದಾರಿಗೆ ತರುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಪೂರ್ಣವಾಗಿ ವಿಫಲವಾಗಿರುವುದೇ ಇಷ್ಟೆಲ್ಲ ಅವಾಂತರಕ್ಕೆ ಕಾರಣವಾಗಿದೆ. ಟ್ರಾಫಿಕ್ ಪೊಲೀಸರು ಬೈಕ್ ಸವಾರರನ್ನು ಅಡ್ಡಗಟ್ಟಿ ಹಣ ವಸೂಲಿ ಮಾಡುವುದೇ ತಮ್ಮ ಕಾಯಕ ಎಂಬ ರೀತಿ ವರ್ತಿಸುತ್ತಿದ್ದಾರೆ.

# ಸರ್ಕಾರಿ ಶಾಲೆಗಳಿಂದ ವಿದ್ಯಾರ್ಥಿಗಳು ವಿಮುಖ

## ಎಚ್ಚೆತ್ತುಕೊಳ್ಳದ ಶಿಕ್ಷಣ ಇಲಾಖೆ | ಈ ವರ್ಷ ಹೊರಗುಳಿದವರ ಸಂಖ್ಯೆ 80

ಹಾಸನ: ಸರ್ಕಾರಿ ಶಾಲೆಗಳ ಉಳಿವಿಗಾಗಿ ಸರ್ಕಾರ ಹತ್ತಾರು ಯೋಜನೆ ರೂಪಿಸುತ್ತಿದೆಯಾದರೂವಿದ್ಯಾರ್ಥಿಗಳ ಹಾಜರಾತಿಯಲ್ಲಿ ಸುಧಾರಣೆಯಾಗದೆ ಜ್ಞಾನ ದೇಗುಲಗಳನ್ನು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 7 ಸಾವಿರ ಮಕ್ಕಳು ಸರ್ಕಾರಿ ಶಾಲೆಯಿಂದ ಹೊರಗುಳಿದಿದ್ದಾರೆ. ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳ ಪಟ್ಟಿ ಸಿದ್ಧಪಡಿಸಿಕೊಂಡಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಸರ್ಕಾರಕ್ಕೆ ವರದಿ ಸಲ್ಲಿಸಲು ಸಿದ್ಧತೆ ನಡೆಸುತ್ತಿದೆ. ಅವಶ್ಯವಿರುವ ಕಡೆ ಅಕ್ಕ ಪಕ್ಕದ ಶಾಲೆಗಳ ಸಂಯೋಜನೆಗೆ ಕ್ರಮ ಕೈಗೊಂಡಿದೆ.

ಜಿಲ್ಲೆಯಲ್ಲಿ 1249 ಕಿರಿಯ ಪ್ರಾಥಮಿಕ ಶಾಲೆ, 969 ಹಿರಿಯ ಪ್ರಾಥಮಿಕ ಶಾಲೆ, 241 ಪ್ರೌಢ ಶಾಲೆ ಸೇರಿ 2,249 ಸರ್ಕಾರಿ ಶಾಲೆಗಳಿವೆ. ಜಿಲ್ಲೆಯ 579 ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಮಕ್ಕಳಿದ್ದಾರೆ. 681 ಶಾಲೆಯಲ್ಲಿ 20ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 2023-24ನೇ ಸಾಲಿನಲ್ಲಿ ಜಿಲ್ಲಾದ್ಯಂತ 86,231 ವಿದ್ಯಾರ್ಥಿಗಳು ಸರ್ಕಾರಿ ಶಾಲೆಯಲ್ಲಿ ಪ್ರವೇಶ ಪಡೆದಿದ್ದಾರೆ. 2024-25ನೇ ಸಾಲಿಗೆ ಮಕ್ಕಳ ಸಂಖ್ಯೆ 79,283ಕ್ಕೆ ಇಳಿಕೆ ಕಂಡಿದೆ. ಅಂದರೆ ಒಂದು ವರ್ಷದಲ್ಲಿ 6948 ವಿದ್ಯಾರ್ಥಿಗಳು ಶಾಲೆಯಿಂದ ವಿಮುಖರಾಗಿದ್ದಾರೆ.

ಮೂರು ವರ್ಷದಲ್ಲಿ 35 ಶಾಲೆ ಬಂದ್: ದಾಖಲಾತಿ ಕೊರತೆ, ಶಿಕ್ಷಕರ ಸಮಸ್ಯೆ ಹಾಗೂ ಮತ್ತಿತರ ಕಾರಣಗಳಿಂದ ಕಳೆದ ಮೂರು ವರ್ಷಗಳಲ್ಲಿ 35 ಶಾಲೆಗಳನ್ನು ಬಂದ್ ಮಾಡಲಾಗಿದೆ. ಈ ವರ್ಷ ಸಹ ಆ ಸಂಖ್ಯೆಯಲ್ಲಿ ಏರಿಕೆಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸರ್ಕಾರಿ ಶಾಲೆ ಉಳಿಸಬೇಕು ಎನ್ನುವುದು ಅಧಿಕಾರಿ ಹಾಗೂ ಜನಪ್ರತಿನಿಧಿಗಳ ಭಾಷಣದ ಸರಕಾಗಿದೆಯೇ ಹೊರತು ಕಠಿಣ ಕ್ರಮ ಜರುಗಿಸದೆ ಇರುವುದರಿಂದ ಸರ್ಕಾರಿ ಶಾಲೆಗಳು ಬಾಗಿಲು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.



ಹೊರಗುಳಿದ 80 ಮಕ್ಕಳು: ಸರ್ಕಾರಿ ಶಾಲೆಗಳಿಂದ ವಿದ್ಯಾರ್ಥಿಗಳು ವಿಮುಖರಾಗುತ್ತಿರುವುದು ಒಂದೆಡೆಯಾದರೆ ಪ್ರವೇಶ ಪಡೆದಿದ್ದರೂ 80 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಿಕ್ಷಣ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ಈ ವರದಿ ಬಹಿರಂಗವಾಗಿದೆ. ಪೋಷಕರ ವಲಸೆ, ಸಾರಿಗೆ ಸೌಲಭ್ಯ ಇಲ್ಲದಿರುವುದು, ಕಲಿಕೆಯಲ್ಲಿ ನಿರಾಸಕ್ತಿ, ಅನಾರೋಗ್ಯ ಹೀಗೆ ನಾನಾ ಕಾರಣಗಳಿಂದ ಮಕ್ಕಳು ಶಾಲೆಗೆ ಬರುತ್ತಿಲ್ಲ. ಕಲಿಕೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಆಸಕ್ತಿ ತೋರುತ್ತಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಸರ್ಕಾರಿ ಶಿಕ್ಷಕರ ಕೆಲಸದೊತ್ತಡ: ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಸುಧಾರಣೆ ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿಯಾಗದ ಹಿನ್ನಲೆಯಲ್ಲಿ ಪೋಷಕರು ಕಷ್ಟವಾದರೂ ಸರಿ ಖಾಸಗಿ ಶಾಲೆಯೇ ಉತ್ತಮ ಎನ್ನುತ್ತಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ ಪಾಠ ಬೋಧನೆ ಮಾತ್ರವಲ್ಲದೆ ಸರ್ಕಾರ ಅವರಿಗೆ ಸಂಬಂಧವಿಲ್ಲದ ಹೆಚ್ಚುವರಿ ಕೆಲಸಗಳನ್ನು ವಹಿಸುವುದರಿಂದ ಪಠ್ಯ ಬೋಧನೆಗೆ ಸಮಯ ನೀಡಲು ಸಾಧ್ಯವಾಗುತ್ತಿಲ್ಲ. ಕಾಟಾಚಾರಕ್ಕೆ ಎಂಬಂತೆ ಮಕ್ಕಳು ಶಾಲೆಗೆ ಹೋಗುತ್ತಾರೆ. ಖಾಸಗಿ ಶಾಲೆಗಳಲ್ಲಿ ಉತ್ತಮ ಪಾಠ ಪ್ರವಚನ ನಡೆಯುತ್ತದೆ ಎಂಬುದು ಪೋಷಕರ ಅಭಿಪ್ರಾಯವಾಗಿದೆ.

ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹೆಚ್ಚಿದೆ. ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ 150ಕ್ಕೂ ಹೆಚ್ಚಿದೆ. ಒಂದರಿಂದ ಏಳನೇ ತರಗತಿ ವರೆಗೆ ಒಬ್ಬ ಶಿಕ್ಷಕ ಅಥವಾ ಶಿಕ್ಷಕಿ ಪಾಠ ಮಾಡುತ್ತಾರೆ. ಅದರಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿ ನಿರೀಕ್ಷಿಸುವುದು ಕಷ್ಟದ ಕೆಲಸ. ಇನ್ನು ಖಾಸಗಿ ಶಾಲೆಗಳು ಹೆಚ್ಚಿರುವುದುರು, ಸಾರಿಗೆ ವ್ಯವಸ್ಥೆ, ಕಲಿಕೆಗೆ ಆದ್ಯತೆ ನೀಡುವುದರಿಂದ ಸರ್ಕಾರಿ ಶಾಲೆಗಳತ್ತ ವಿದ್ಯಾರ್ಥಿಗಳು ಹಾಗು ಪೋಷಕರು ಆಸಕ್ತಿ ತೋರುತ್ತಿಲ್ಲ.

ಸರ್ಕಾರಿ ಶಾಲೆಗಳ ದಾಖಲಾತಿ ಕುಸಿತವಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಖಾಸಗಿ ಶಾಲೆಗಳ ವ್ಯಾಮೋಹದಿಂದ ಪೋಷಕರು ಹೊರ ಬರಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾಹಿತಿ ತರಿಸಿಕೊಳ್ಳಲಾಗುತ್ತಿದೆ ಎಂದು ಪ್ರಭಾರ ಡಿಡಿಪಿಐ ಹೆಚ್.ಎಸ್. ಚಂದ್ರಶೇಖರ್ ಹೇಳಿದರು.

# ಗ್ರಾಹಕರ ಆಸಕ್ತಿ ಅರಿಯಲು ಕೃತಕ ಬುದ್ಧಿಮತ್ತೆ ನೆರವು

ಹಾಸನ: ರಿಟೇಲ್ ಅಂಗಡಿಗಳಲ್ಲಿ ಸಿಸಿಟಿವಿ ಬಳಸಿ ಸೆರೆ ಹಿಡಿಯುವ ವಿಡಿಯೋಗಳನ್ನು ವಿಶ್ಲೇಷಿಸಿ, ಗ್ರಾಹಕರು ಯಾವ ಉತ್ಪನ್ನಗಳನ್ನು ಖರೀದಿಸಲು ಆಸಕ್ತಿ ತೋರುತ್ತಿದ್ದಾರೆ ಎಂಬುದನ್ನು ವಿಷನ್ ಎಐ ತಂತ್ರಜ್ಞಾನದ ಮೂಲಕ ಪತ್ತೆ ಹಚ್ಚಬಹುದು ಎಂದು ಜೆನ್‌ರಿಯಾಲಿಟಿ ಟೆಕ್ನಾಲಜಿಸ್ ಸಂಸ್ಥೆಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಜೆಬಾಖಾನ್ ತಿಳಿಸಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿಷನ್ ಎಐ ತಂತ್ರಜ್ಞಾನ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆ ಎಂದರೆ ಚಾಟ್ ಜಿಪಿಟಿಯಂತಹ ಚಾಟ್ ಬಾಟ್‌ಗಳಷ್ಟೇ ಅಲ್ಲ, ವಿಷನ್ ಎಐ ಸೇರಿದಂತೆ ಇತರ ಕ್ಷೇತ್ರಗಳೂ ಇವೆ. ವಿಷನ್ ಎಐ ತಂತ್ರಜ್ಞಾನ ಚಿತ್ರರೂಪದ ದತ್ತಾಂಶವನ್ನು ವಿಶ್ಲೇಷಿಸಿ, ಅರ್ಥೈಸಿಕೊಂಡು, ಪ್ರತಿಕ್ರಿಯಿಸುವ ಪ್ರಕ್ರಿಯೆ ಒಳಗೊಂಡಿದೆ ಎಂದರು.

ಲಾರ್ಜ್ ಲಾಂಗ್ವೇಜ್ ಮಾಡೆಲ್‌ಗಳಿಗೆ ಅಧಿಕ ಪ್ರಮಾಣದ ದತ್ತಾಂಶ ಬೇಕು. ಕನ್ವೊಲ್ಯುಷನಲ್ ನ್ಯೂರಲ್ ನೆಟ್ವರ್ಕ್ ಆಧರಿಸಿದ ವಿಷನ್ ಎಐ ಕಡಿಮೆ ದತ್ತಾಂಶ ಬಳಸಿಕೊಂಡು ಉತ್ತಮ ಫಲಿತಾಂಶ ನೀಡಲಿದೆ. ಗೂಗಲ್ ಲೆನ್ಸ್ ರೀತಿಯ ಆಪ್‌ಗಳ ಕಾರ್ಯನಿರ್ವಹಣೆ ಹಿಂದೆ ವಿಷನ್ ಎಐ ತಂತ್ರಜ್ಞಾನವಿದೆ ಎಂದು ವಿವರಿಸಿದರು.

ಸಿಸಿಟಿವಿ ಕ್ಯಾಮೆರಾಗಳು ಸೆರೆ ಹಿಡಿಯುವ ವಿಡಿಯೋ ಬಳಸಿಕೊಂಡು ನಿರ್ದಿಷ್ಟ ಪ್ರದೇಶದಲ್ಲಿನ ಚಟುವಟಿಕೆಗಳನ್ನು ವಿಶ್ಲೇಷಿಸಬಹುದು. ಇದನ್ನುತಯಾರಿಕಾ ಕಾರ್ಖಾನೆಗಳಲ್ಲಿ ಕೂಡ ಬಳಸಬಹುದು. ತಯಾರಿಕಾ ಘಟಕದಲ್ಲಿ ಕಾರ್ಮಿಕರು ಏನು ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಬಹುದು. ಕಾರ್ಖಾನೆಗಳಲ್ಲಿ ಎಷ್ಟು ಉತ್ಪನ್ನಗಳನ್ನು ತಯಾರಿಸಲಾಯಿತು, ಯಾವ ಉತ್ಪನ್ನಗಳಲ್ಲಿ ದೋಷಗಳಿವೆ ಮತ್ತು ಯಾವ ರೀತಿಯ ದೋಷಗಳಿವೆ ಎಂಬುದನ್ನು ವಿಷನ್ ಎಐ ಬಳಸಿ ಪತ್ತೆ ಹಚ್ಚಬಹುದು ಎಂದು ಹೇಳಿದರು.

ಟ್ರಾಫಿಕ್ ನಿಯಮಗಳ ಉಲ್ಲಂಘನೆ ಪತ್ತೆ ಹಚ್ಚಲು, ಯಾವ ಸಮಯದಲ್ಲಿ ಹೆಚ್ಚು ಟ್ರಾಫಿಕ್ ಇರಲಿದೆ ಎಂಬುದನ್ನು ವಿಶ್ಲೇಷಿಸಲು, ನಂಬರ್ ಪ್ಲೇಟ್ ಓದಲು ಕೂಡ ವಿಷನ್ ಎಐ ಬಳಸಬಹುದುಎಂದು ತಿಳಿಸಿದರು.

ಪ್ರಾಂಶುಪಾಲ ಡಾ. ಎ.ಜೆ. ಕೃಷ್ಣಯ್ಯ, ನಿರ್ದೇಶಕ ಡಾ.ಎಸ್. ಪ್ರದೀಪ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯದರ್ಶಿ ಸಿ.ಆರ್. ಜಗದೀಶ್, ಖಜಾಂಚಿ ಪಾರ್ಶ್ವನಾಥ್, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಉಪಾಧ್ಯಕ್ಷ ಅರ್ಜುನ್ ಗುರುದೇವ್, ಡೀನ್‌ಗಳಾದ ಡಾ. ಗೀತಾ ಕಿರಣ್ ಹಾಗೂ ಡಾ. ಎಚ್.ಜೆ. ಅಮರೇಂದ್ರ, ಜೆನ್ ರಿಯಾಲಿಟಿ ಟೆಕ್ನಾಲಜಿಸ್ ಸಂಸ್ಥೆಯಉತ್ಪನ್ನ ವಿಭಾಗದ ಮುಖ್ಯಸ್ಥ ರಿಷಬ್ ಶಿವಕುಮಾರ್ ಇತರರಿದ್ದರು.



# ಜೊಮ್ಯಾಟೊ ಸಿಬ್ಬಂದಿ ಪ್ರತಿಭಟನೆ: ಸೇವೆಯಲ್ಲಿ ವ್ಯತ್ಯಯ

ಹಾಸನ: ಆನ್‌ಲೈನ್ ಆಹಾರ ವಿತರಣಾ ವೇದಿಕೆ ಜೊಮ್ಯಾಟೊ ಸಂಸ್ಥೆ ಸಿಬ್ಬಂದಿ ಹತ್ತು ಹಲವು ಸಮಸ್ಯೆ ಎದುರಿಸುತ್ತಿದ್ದು ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದಲ್ಲಿ ನೌಕರರು ಕೆಲಸ ಬಹಿಷ್ಕರಿಸಿ ಪ್ರತಿಭಟಿಸಿದರು.

ಮನೆ ಮನೆಗೆ ಆಹಾರ ವಿತರಿಸುವ ಜೊಮ್ಯಾಟೊ ಪ್ಲಾಟ್‌ಫಾರ್ಮ್‌ನಡಿ ನಗರದಲ್ಲಿ 200ಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಡೆಲಿವರಿ ಸ್ಥಗಿತಗೊಳಿಸಿದ್ದರಿಂದ ಸಾರ್ವಜನಿಕರು ತೊಂದರೆ ಅನುಭವಿಸಿದರು.

ಜೊಮ್ಯಾಟೊ ಸಿಬ್ಬಂದಿ ದಿನಕ್ಕೆ 12 ರಿಂದ 14 ಗಂಟೆ ಕೆಲಸ ಮಾಡಬೇಕಾಗುತ್ತದೆ. ಮೊದಲೆಲ್ಲ 1 ರಿಂದ 1.5 ಸಾವಿರ ರೂ. ವರೆಗೆ ದುಡಿಮೆಯಾಗುತ್ತಿತ್ತು. ಆದರೆ ಕಂಪನಿ ಈಗ ನೀಡುತ್ತಿರುವ ಸಂಭಾವನೆ ತೀರಾ ಕಡಿಮೆಯಾಗಿದೆ. ದಿನಕ್ಕೆ 400 ರೂಪಾಯಿ ಗಳಿಸುವುದು ಕಷ್ಟವಾಗಿದೆ. ಆಹಾರ ಪದಾರ್ಥವನ್ನು ಗ್ರಾಹಕರು ಬುಕ್ ಮಾಡಿದ ಸ್ಥಳಕ್ಕೆ ತೆಗೆದುಕೊಂಡು




ಹೋಗುವುದು ಸುಲಭದ ಕೆಲಸವಲ್ಲ. ಮೊದಲು ಟ್ರಾವೆಲ್ ವೆಚ್ಚವನ್ನು ಪಿಕ್ ಅಂಡ್ ಡ್ರಾಪ್‌ಗೆ ನೀಡುತ್ತಿದ್ದರು. ಆದರೆ ಈಗ ಅದನ್ನು ಕಡಿತಗೊಳಿಸಿದ್ದಾರೆ. ಅಪಾಯಕಾರಿ ಸ್ಥಳಗಳಿಗೆ ರಾತ್ರಿ ಹೊತ್ತು ಡೆಲಿವರಿ ಅಸಾಧ್ಯವೆಂದರೂ ಒತ್ತಾಯದಿಂದ ಕಳುಹಿಸುತ್ತಾರೆ. ಅನೇಕ ಗ್ರಾಹಕರು ಕುಡಿದ ಅಮಲಿನಲ್ಲಿ ಜಗಳ ಮಾಡಿದ ಸನ್ನಿವೇಶಗಳಿವೆ. ಈ ಸಂದರ್ಭಗಳಲ್ಲಿ ಪೊಲೀಸ್ ನೆರವು ಪಡೆಯಲು ಸಂಸ್ಥೆ ನೆರವಿಗೆ ಬರುವುದಿಲ್ಲ ಎಂದು ಆರೋಪಿಸಿದರು.

ಸಂಸ್ಥೆಯ ಜಿಲ್ಲಾ ಮುಖ್ಯಸ್ಥರಿಗೆ ಈ ಕುರಿತು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ನಮ್ಮ ಸಮಸ್ಯೆಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಜೊಮ್ಯಾಟೊ ಸಿಬ್ಬಂದಿ ಚೇತನ್, ಕೃಷ್ಣ, ಕುಮಾರ್, ವಿನಾಯಕ, ವಿನಯ್, ಕುಮಾರ್, ಸೋಮು ಮತ್ತಿತರರಿದ್ದರು.

# ಡಾ. ಭಗವಾನ್ ರಾಜೀವ್ ಗಾಂಧಿ ವಿವಿ ಉಪಕುಲಪತಿ

ಚನ್ನರಾಯಪಟ್ಟಣ: ಚನ್ನರಾಯಪಟ್ಟಣದ ಡಾ. ಬಿ.ಸಿ. ಭಗವಾನ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಆಯ್ಕೆಯಾಗಿದ್ದಾರೆ.

ಡಾ. ಬಿ.ಸಿ. ರಾಯ್ ಪ್ರಶಸ್ತಿ ಪುರಸ್ಕೃತ ಭಗವಾನ್ ಅವರು ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪಿಯು ವ್ಯಾಸಂಗವನ್ನು ಪಟ್ಟಣದ ನವೋದಯ ವಿದ್ಯಾ ಶಾಲೆಯಲ್ಲಿ ಪೂರೈಸಿದ್ದಾರೆ. ನಾಲ್ಕು ಬಾರಿ ಸನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.



ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಉಪನ್ಯಾಸಕ, ವೈದ್ಯರಾಗಿ ಸೇವೆ ಮಾಡಿದ್ದರು. ಕೆಂಪೇಗೌಡ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲ ರಾಗಿ ಸೇವೆ ಸಲ್ಲಿಸಿದ್ದಾರೆ. ಲಂಡನ್‌ನಲ್ಲಿ ಎಫ್‌ಆರ್‌ಸಿಎಸ್, ಫೆಲೋ ರಾಯಲ್ ಸೊಸೈಟಿ ಆಫ್ ಸರ್ಜರಿ ಮಾಡಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವಿಶಿಷ್ಟ ಸೇವಾ ಪ್ರಶಸ್ತಿ ನೀಡಿ ಅವರನ್ನು ಗೌರವಿಸಲಾಗಿದೆ. ಡಾ. ಭಗವಾನ್ ಅವರು ಚಿಕ್ಕಬಿಳ್ತಿಯ ಬಾಲ್‌ಗೋಪಾಲ್ ಅವರ ಪುತ್ರ.

# ಹಾರನಹಳ್ಳಿ: ಜಲ್ಲಿ ತೆರವಿಗೆ ಸಾರ್ವಜನಿಕರ ಆಗ್ರಹ

ಹಾರನಹಳ್ಳಿ: ಇಲ್ಲಿನ ಗ್ರಾಮ ಪಂಚಾಯಿತಿ ಮುಂಭಾಗ ಚರಂಡಿ ಕಾಮಗಾರಿಗಾಗಿ ಹಾಕಿದ್ದ ಜಲ್ಲಿ ಹಾಗೆಯೇ ಇದ್ದು ತೆರವುಗೊಳಿಸದೆ ಇರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಭಾರೀ ತೊಂದರೆಯಾಗುತ್ತಿದೆ.



ಗ್ರಾಮ ಪಂಚಾಯಿತಿಗೆ ನಿತ್ಯ ವೃದ್ಧರು, ಮಹಿಳೆಯರು ಬರುತ್ತಾರೆ. ಆದರೆ ಜಲ್ಲಿ ರಾಶಿಗಟ್ಟಲೇ ಬಿದ್ದಿರುವುದರಿಂದ ನಡೆದಾಡಲು ಅಸಾಧ್ಯ ಎನ್ನುವಂತಹ ಪರಿಸ್ಥಿತಿ ಇದೆ. ಒಂದು ವರ್ಷದಿಂದ ಕೆಲಸ ಮಾಡದೆ ನಿರ್ಲಕ್ಷ್ಯ ವಹಿಸಿರುವುದರಿಂದ ಜಲ್ಲಿ ರಸ್ತೆ ಮೇಲೆ ಹರಡಿದೆ. ಅದರಿಂದ ವಾಹನ ಸವಾರರು ಕಿರಿಕಿರಿ ಅನುಭವಿಸುವಂತಾಗಿದೆ.

ಸಮಸ್ಯೆ ಗೊತ್ತಿದ್ದರೂ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಗ್ರಾಮ ಪಂಚಾಯಿತಿ ಮುಂಭಾಗದ ಧ್ವಜ ಕಟ್ಟೆ ಸುತ್ತಲೂ ಕಸದ ರಾಶಿ ಬಿದ್ದಿದ್ದು ತೆರವುಗೊಳಿಸಬೇಕು ಎಂದು ಗ್ರಾ.ಪಂ. ಮಾಜಿ ಅಧ್ಯಕ್ಷ ಹೆಚ್.ಎಸ್. ನಂದೀಶ್ ಮತ್ತು ಸ್ಥಳೀಯರು ಒತ್ತಾಯಿಸಿದ್ದಾರೆ.

# ಮಕ್ಕಳಿಗೆ ಮಾನವೀಯ ಮೌಲ್ಯ ಕಲಿಸಿ

## ಟೈಮ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಗಂಗಾಧರ್ ಪ್ರತಿಪಾದನೆ

ಹಾಸನ: ಶಾಲೆ ಹಾಗೂ ಕುಟುಂಬ ಮಕ್ಕಳಿಗೆ ಪಠ್ಯ ಚಟುವಟಿಕೆಗಳ ಜೊತೆಗೆ ಮಾನವೀಯ ಮೌಲ್ಯಗಳನ್ನು ತಿಳಿಸಿಕೊಡಬೇಕಾದ ಅವಶ್ಯಕತೆ ಇದೆ. ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಹೇಳಿದರು.

ನಗರದ ವಿಜಯ ನಗರ ಬಡಾ ವಣೆಯಲ್ಲಿರುವ ಟೈಮ್ಸ್ ಅಂತಾರಾಷ್ಟ್ರೀಯ ಶಾಲೆ ಯಲ್ಲಿ ನಡೆದ ಟೈಮ್ಸ್ ಭೋಜನೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಹಲವು ಬಗೆಯ ಸಂಸ್ಕೃತಿ ಯನ್ನು ಕಾಣಬಹುದು. ಎಲ್ಲಾ ಸಂಸ್ಕೃತಿಗಳಲ್ಲಿ ಗುರು ಹಿರಿಯರನ್ನು ಹಾಗು ಶಿಕ್ಷಕರನ್ನು ಗೌರವಿಸುವುದನ್ನು ತಿಳಿಸಿದೆ. ಅದರಂತೆ ಮಕ್ಕಳಿಗೆ



ಓದಿನ ಜೊತೆ ಜೊತೆಗೆ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಮೂಲ ಉದ್ದೇಶ ತಿಳಿಸಿಕೊಡಬೇಕು. ಗುರು ಹಿರಿಯರೊಂದಿಗೆ ಹೇಗೆ ನಡೆದುಕೊಳ್ಳಬೇಕು, ಯಾರೊಂದಿಗೆ ಹೇಗೆ ಮಾತನಾಡಬೇಕು ಹೀಗೆ ಎಲ್ಲಾವು ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ತಿಳಿಸಿಕೊಡಬೇಕು ಎಂದರು.

ವಿಭಿನ್ನ ಸಂಸ್ಕೃತಿಯ ಸಮ್ಮಿಲನವೇ ಭಾರತೀಯ ಸಂಸ್ಕೃತಿಗೆ ಗರಿಮೆ, ಅಂತಹ ವೈಭವ ಪೂರಕ ಸಂಸ್ಕೃತಿಗೆ ಅಡಿಪಾಯ ಮಾಡಿ ಕೊಡುವುದು ಎಲ್ಲ ಕರ್ತವ್ಯವಾಗಿದೆ. ಇದಲ್ಲದೇ ಮಕ್ಕಳಿಗೆ ತಿನ್ನುವ ಆಹಾರ ಪದಾರ್ಥಗಳ ಬಗ್ಗೆ ಗೌರವಿಸುವುದನ್ನು ತಿಳಿಸಿಕೊಡಬೇಕಾದ ಇಂದು ಅನಿವಾರ್ಯತೆ ಇದೆ. ದೇಶದಲ್ಲಿ ಇತ್ತೀಚೆಗೆ ಆಹಾರ ಪದಾರ್ಥ ವ್ಯರ್ಥ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ತಮ್ಮ ಸಂಸ್ಕೃತಿ ಸಂಸ್ಕಾರದ ಅರಿವು ಮೂಡಿಸುವ ಸಲುವಾಗಿ ವಿಜೃಂಭಣೆಯಿಂದ ಹಬ್ಬದೂಟವನ್ನು ಶಾಲೆಯಲ್ಲಿ ಆಯೋಜಿಸಲಾಗಿದೆ ಎಂದರು.

ಶಿಕ್ಷಕರೆಲ್ಲರೂ ಒಟ್ಟಾಗಿ ಮಕ್ಕಳೊಂದಿಗೆ ಮನೆ ಮಂದಿಯಂತೆ ಒಟ್ಟಾಗಿ ಕುಳಿತು ಆಹಾರ ಸೇವಿಸಿದ್ದಾರೆ. ಶಾಲೆಯ ಸುಮಾರು 1500 ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಊಟ ಸವಿಯುವ ಮೂಲಕ ವಿದ್ಯಾರ್ಥಿಗಳ ಒಂದು ಅವಿನಾಭಾವ ಸಂಬಂಧಕ್ಕೆ ಹೆಗ್ಗುರುತಾಗಿ ಕಾಣುತ್ತದೆ.

ಮಕ್ಕಳಲ್ಲಿ ಬಾಳೆ ಎಲೆ ಊಟದ ಪ್ರಾಮುಖ್ಯತೆ ಪ್ಲಾಸ್ಟಿಕ್ ಬಳಕೆನ್ನು ಕಡಿಮೆ ಮಾಡುವುದು ಹಾಗು ಅನ್ನದ ಮಹತ್ವ ತಿಳಿಸುವ ಮಹಾ ಉದ್ದೇಶವಾಗಿದೆ. ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಪಠ್ಯದ ಜೊತೆಗೆ ಈ ತರನಾದ ಹಲವು ಮಾನವೀಯ ಮೌಲ್ಯದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಮಾಡಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಶಿಕ್ಷಕಿ, ಶಿಕ್ಷಕರು ಹಾಗೂ ಇತರರು ಹಾಜರಿದ್ದರು.

# ಸಮಾಜದಲ್ಲಿ ತೋರಿಕೆಯ ಭಕ್ತಿ ಹೆಚ್ಚುತ್ತಿದೆ

ಸಕಲೇಶಪುರ: ಪ್ರಜಾಪಿತಾ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ 89ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಅಂಗವಾಗಿ ಇತಿಹಾಸ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗ ಪುಣ್ಯ ದರ್ಶನ ಹಾಗೂ ಆಧ್ಯಾತ್ಮಿಕ ಚಿತ್ರ ಪ್ರದರ್ಶನ ಫೆ. 23 ರಿಂದ ಮಾ. 2ರ ವರೆಗೆ ನೆರವೇರಿತು.

ಬ್ರಹ್ಮಕುಮಾರಿ ವಿಜಯ ಅಕ್ಕ ಮಾತನಾಡಿ, ಇಂದಿನ ಸಮಾಜದಲ್ಲಿ ಭಾವನಾತ್ಮಕ ಭಕ್ತಿಯ ಬದಲು ಪ್ರದರ್ಶನದ ಪೂಜೆ ಹೆಚ್ಚಾಗಿದೆ. ದೇವರ ಪಾದುಕೆ ತಂದು ಅದನ್ನು ಆರಾಧನೆ ಮಾಡುವ ಹಬ್ಬಗಳ ಆಚರಣೆ ಹೆಚ್ಚಾಗುತ್ತಿದೆ. ಪರಮಾತ್ಮನನ್ನು ಪ್ರೀತಿಯಿಂದ, ನಿಶ್ಚಿತ ಭಾವನೆಯಿಂದ ಪೂಜಿಸುವುದು ಕಡಿಮೆಯಾಗುತ್ತಿದೆ. ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ರಾಜಯೋಗದ ಮೂಲಕ ಭಕ್ತಿಯೋಗ ಹೇಗೆ ಆಚರಿಸಬೇಕು ಎಂಬ ಬಗ್ಗೆ ಪ್ರಭೋದನ ನೀಡಲಾಗುತ್ತದೆ. ನಿರಾಕಾರ




ಪರಮಾತ್ಮನೊಂದಿಗೆ ವಾರ್ತಾಲಾಪ ನಡೆಸುವ ಸುಲಭ ಮಾರ್ಗವನ್ನೇ ಇಲ್ಲಿ ಕಲಿಸಲಾಗುತ್ತದೆ ಎಂದು ಹೇಳಿದರು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜ್ ಕುಮಾರ್ ಮಾತನಾಡಿ, ನಮ್ಮದು ಬಡ ಕುಟುಂಬ. ತಂದೆ ಇಲ್ಲದ ಸಂಸಾರದಲ್ಲಿ ತಾಯಿಯು ನಮಗೆ ವಿದ್ಯಾಭ್ಯಾಸ ಮಾಡಿಸುವ ಮೂಲಕ ಧೈರ್ಯ ತುಂಬಿದರು. ಅವರ ಬೆಂಬಲವೇ ಪುರಸಭಾ ಅಧ್ಯಕ್ಷೆಯಾಗಿ, ವಕೀಲೆಯಾಗಿ ಹಾಗೂ ಸಂಸಾರಸ್ಥಳಾಗಿ ಕಾರ್ಯನಿರ್ವಹಿಸಲು ಶಕ್ತಿಯಾಗಿದೆ. ಬ್ರಹ್ಮಕುಮಾರಿ ಸಂಸ್ಥೆಯ ಕುರಿತು ಕೇಳಿದ್ದೆ ಆದರೆ ಅಲ್ಲಿ ಯಾವ ತರಬೇತಿ ನೀಡಲಾಗುತ್ತದೆ ಎಂಬುದು ಗೊತ್ತಿರಲಿಲ್ಲ.

ಆದರೆ ಈ ಸಂಸ್ಥೆ ಮಾನಸಿಕ ನೆಮ್ಮದಿಯನ್ನು ನೀಡುವ ಜ್ಞಾನಮಯ ಶಿಕ್ಷಣ ನೀಡುತ್ತಿದೆ. ಶಾಶ್ವತವಾದ ನೆಮ್ಮದಿಗಾಗಿ ನಾನು ಈ ಸಂಸ್ಥೆಗೆ ಭೇಟಿ ನೀಡುತ್ತೇನೆ ಎಂದರು.

ಆಶಾ ಮೇಲ್ವಿಚಾರಕಿ ಭೂಮಿಕಾ ಮಾತನಾಡಿ, ಒತ್ತಡದ ಜೀವನದಿಂದ ಮಾನಸಿಕ ಒತ್ತಡ ಹೆಚ್ಚಾಗುತ್ತಿದ್ದು, ಆರೋಗ್ಯ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಆದ್ದರಿಂದ ದಿನನಿತ್ಯದ ಜೀವನದಲ್ಲಿ ಆಧ್ಯಾತ್ಮಿಕತೆ, ಭಕ್ತಿಯೋಗ ಮತ್ತು ರಾಜಯೋಗವನ್ನು ಪಾಲಿಸಬೇಕು ಎಂದರು,

ಅಕ್ಕಮಹಾದೇವಿ ಮಹಿಳಾ ಸಮಾಜದ ಕೋಮಲಾ ದಿನೇಶ್, ಬಿ.ಕೆ. ಚಂದ್ರಿಕಾ, ಬಿ.ಕೆ. ಧನಲಕ್ಷ್ಮೀ, ಯೋಗ ಚೇತನ ಟ್ರಸ್ಟ್ ಅಧ್ಯಕ್ಷ ರಂಗನಾಥ ಶೆಟ್ಟರ್, ಜಗದೀಶ್, ಶಿವಣ್ಣ, ಸಚಿನ್, ಶಶಿ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248

C M Y K C M Y K C M Y K C M Y K